ದಿನಾಂಕ: 26.11.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 99 ರಲ್ಲಿ ಶ್ರೀ ಹೆಚ್.ವಿ. ಅಶ್ವತ್ಥ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಶ್ರೀ ಹೆಚ್.ವಿ. ಅಶ್ವತ್ಥ, ನೋಡಲ್ ಅಧಿಕಾರಿಗಳು
2. ಶ್ರೀ ಸುಭಾಸ್ ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 99
3. ಶ್ರೀ ಮಲ್ಲಿಕಾರ್ಜುನ.ಎಂ.ಆರ್. ಬಿ.ಡಬ್ಲ್ಯೂ.ಎಸ್.ಎಸ್.ಬಿ.
4. ಶ್ರೀ ಜೆ.ಸಿ. ಲೋಕೇಶ್ ಆಸೆಸರ್
5. ಶ್ರೀಮತಿ ದಿವ್ಯಾ, ಹಿರಿಯ ಆರೋಗ್ಯ ಪರಿವೀಕ್ಷಕರು
6. ಶ್ರೀ ಬಸವರಾಜು, ಆಹಾರ ನಿರೀಕ್ಷಕರು
7. ಶ್ರೀ ಶಿವರಾಮಯ್ಯ, ಸಹಾಯಕ ಸಂಚಾರಿ ನಿರೀಕ್ಷಕರು
8. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
9. ಶ್ರೀಮತಿ ನಿರ್ಮಲಾ ಶೇಖರ್, ಸಿ.ಪಿ.ಪಿ. ರೆಪ್ರೆಸೆಂಟೇಟಿವ್
10. ಶ್ರೀ ರಮೇಶ್, ಎಸ್.ಎ.ಜಿ.
11. ಶ್ರೀಮತಿ ವರಲಕ್ಷ್ಮಿ
12. ಶ್ರೀ ಮಲ್ಲಿಕಾರ್ಜುನ, ಎಂ.ಆರ್.
13. ಶ್ರೀ ವಿಜಯಕುಮಾರ್. ಮಾರ್ಷಲ್
14. ಶ್ರೀ ಶ್ರೀನಿವಾಸ.ಎನ್.
15. ಶ್ರೀ ರಾಜಣ್ಣ , ಸದಸ್ಯರು
16. ಶ್ರೀ ಉಮೇಶ್, ಸದಸ್ಯರು
17. ಶ್ರೀ ಆನಂದ್

ದಿನಾಂಕ: 28.10.2021 ರಂದು ಹಿಂದಿನ ಸಭೆಯಲ್ಲಿ ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 99 ರಾಜಾಜಿನಗರದ ಡಾ: ಅಬ್ದುಲ್ ಕಲಾಂ, ಸಭಾಂಗಣದಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ವಾರ್ಡಿನ ಸದಸ್ಯರು ಸಭೆಯಲ್ಲಿ ವಾರ್ಡಿನ ಬೀದಿ ದೀಪಗಳು ಉರಿಯುತ್ತಿಲ್ಲ ಎಂದು ಚರ್ಚಿಸಲಾಯಿತು. ಅದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ವಿದ್ಯುತ್ ಅಭಿಯಂತರರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು ಕೆಲವೊಂದು ರಸ್ತೆಗಳಲ್ಲಿ ಬೀದಿ ದೀಪಗಳು ಉರಿಯುತ್ತಿದ್ದು, ಇನ್ನುಳಿದ ರಸ್ತೆಗಳಲ್ಲಿ ಸರಿಪಡಿಸುವಂತೆ ವಾರ್ಡಿನ ಅಭಿಯಂತರರಿಗೆ ನೋಡಲ್ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದರು.
2. ವಾರ್ಡಿನ ಸದಸ್ಯರುಗಳು ವಾರ್ಡಿನ ಕೆಲವು ರಸ್ತೆಗಳಲ್ಲಿ ಮರದ ಕೊಂಬೆಗಳು ನೇತಾಡುತ್ತಿದ್ದು, ಅದನ್ನು ತುರ್ತಾಗಿ ತೆರವುಗೊಳಿಸುವಂತೆ ಅರಣ್ಯಾಧಿಕಾರಿಗಳಿಗೆ ತಿಳಿಸುವಂತೆ ನೋಡಲ್ ಅಧಿಕಾರಿಗಳು ವಾರ್ಡಿನ ಅಭಿಯಂತರರಿಗೆ ಸೂಚಿಸಿದರು. ನೋಡಲ್ ಅಧಿಕಾರಿಗಳು ಅರಣ್ಯ ಇಲಾಖೆಯಿಂದ ಒಂದು ತಂಡ ಇದ್ದು, ಮತ್ತೊಂದು ತಂಡವನ್ನು ನಿಯೋಜಿಸುವಂತೆ ಮಾನ್ಯ ಜಂಟಿ ಆಯುಕ್ತರು [ಪಶ್ಚಿಮ] ರವರು ತಿಳಿಸಿರುತ್ತಾರೆ.
3. ವಾರ್ಡ್ ಸದಸ್ಯರಾದ ಶ್ರೀ ರಾಜಣ್ಣ ಮತ್ತು ಉಮೇಶ್ ರವರು ಸಿಲ್ಟ್ ಅಂಡ್ ಟ್ರಾಕ್ಟರ್ ಪ್ರತಿ ದಿನ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ ಎಂದು ಸಭೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿ, ಪ್ರತಿ ದಿನ 2 ಟ್ರಿಪ್ ಸಿಲ್ಟನ್ನು ತೆರವುಗೊಳಿಸುವಂತೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
4. ವಾರ್ಡ್ ಸದಸ್ಯರಾದ ಶ್ರೀ ರಾಜಣ್ಣ, ಮತ್ತು ಉಮೇಶ್ ರವರು ಸರ್ವಿಸ್ ರಸ್ತೆಯಲ್ಲಿರುವ ಶೌಚಾಲಯಗಳ ಪ್ರಗತಿಯ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ವಾರ್ಡ್ ಅಭಿಯಂತರರು ಈಗಾಗಲೇ ಇದರ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದ್ದು, ಶೀಘ್ರವಾಗಿ ಘನತ್ಯಾಜ್ಯ ವಿಭಾಗಕ್ಕೆ ಹಸ್ತಾಂತರಿಸಲಾಗುವುದು.

ಪು.ತಿ.ನೋ.

5. ಸದಸ್ಯರುಗಳು ಪಿ ಅಂಡ್ ಟಿ ರಸ್ತೆಯಲ್ಲಿ ಕಸ ಹಾಕಿರುವ ಬಗ್ಗೆ, ಘನತ್ಯಾಜ್ಯ ವಿಭಾಗ ಅಧಿಕಾರಿಗಳ ಜೊತೆ ಚರ್ಚಿಸಿ. ಅದಕ್ಕೆ ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಇದಕ್ಕೆ ಉತ್ತರವಾಗಿ ಘನತ್ಯಾಜ್ಯ ವಿಭಾಗದ ಅಧಿಕಾರಿ ಸದರಿ ಸ್ಥಳದಲ್ಲಿ ಅನುಪಯುಕ್ತ ವಾಹನಗಳನ್ನು ನಿಲ್ಲಿಸಿದ್ದು, ಅದರ ಪಕ್ಕದಲ್ಲಿಯೇ ಸಾರ್ವಜನಿಕರು ಕಸ ಬಿಸಾಡಿದ್ದು, ವಾಹನಗಳನ್ನು ತೆರವುಗೊಳಿಸಿದಲ್ಲಿ, ಅಲ್ಲಿ ಬಿದ್ದಿರುವ ಕಸವನ್ನು ತೆರವುಗೊಳಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.
6. ಶ್ರೀಮತಿ ದಿವ್ಯಾ, ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡಿನಲ್ಲಿ ಒಬ್ಬ ವ್ಯಕ್ತಿ ಆಹಾರ ಪರವಾನಿಗೆ ಮತ್ತು ಟ್ರೇಡ್ ಲೈಸನ್ಸ್ ಕೊಡಿಸುತ್ತೇನೆ ಎಂದು ಸಾರ್ವಜನಿಕರಲ್ಲಿ ಹೇಳಿಕೊಂಡು ತಿರುಗಾಡುತ್ತಿರುವುದು ಕಂಡು ಬಂದಿರುತ್ತದೆ ಎಂದು ತಿಳಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಅಂತಹ ವ್ಯಕ್ತಿಯ ಬಗ್ಗೆ ಗಮನಹರಿಸಿ, ಅವರ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಶಿಫಾರಸ್ಸು ಮಾಡಲು ತಿಳಿಸಿದರು.
7. ನೋಡಲ್ ಅಧಿಕಾರಿಗಳು ಆರೋಗ್ಯಾಧಿಕಾರಿಗಳ ಜೊತೆ ಕೋವಿಡ್ 3ನೇ ಅಲೆಯ ಬಗ್ಗೆ ಚರ್ಚಿಸಿದರು. ಹಾಗೂ 3ನೇ ಅಲೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಈಗಾಗಲೇ ಸಾರ್ವಜನಿರಿಗೆ ಅರಿವು ಮೂಡಿಸಲಾಗುತ್ತಿರುತ್ತದೆ. ಹಾಗೀ ಕೋವಿಡ್ ವ್ಯಾಕ್ಸಿನೇಷನ್ ಶೇ. 98% ಆಗಿದೆ ಎಂದು ಸಭೆಗೆ ತಿಳಿಸಿದರು.
8. ಸದಸ್ಯರಾದ ಶ್ರೀ ಶ್ರೀನಿವಾಸ್ ಮತ್ತು ಇತರರು ಡಾ: ರಾಜ್ ಕುಮಾರ್ ಕಲಾಕ್ಷೇತ್ರದ ಕಡತವನ್ನು ಸಭೆಗೆ ಹಾಜರು ಪಡಿಸುವಂತೆ ತಿಳಿಸಿದರು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರು ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ, ಮುಂದಿನ ಸಭೆಯಲ್ಲಿ ಹಾಜರು ಪಡಿಸಲಾಗುವುದು.
9. ಶ್ರೀ ಅನಂದ್, ಸದಸ್ಯರು, ಉಪತಹಶೀಲ್ದಾರ್, ಕಂದಾಯ ಇಲಾಖೆ ರವರು ಸಭೆಗೆ ಹಾಜರಾಗದ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ನೋಡಲ್ ಅಧಿಕಾರಿಗಳು ಮುಂದಿನ ಸಭೆಗೆ ಹಾಜರಾಗಲು ತಿಳಿಸುವಂತೆ ವಾರ್ಡಿನ ಅಭಿಯಂತರರಿಗೆ ಸೂಚಿಸಿದರು.
10. ವಾರ್ಡ್ ವ್ಯಾಪ್ತಿಯಲ್ಲಿ ವಾಹನಗಳ ವಾರಸುದಾರರಿಲ್ಲದೇ ಅನಧಿಕೃತವಾಗಿ ವಾಹನಗಳನ್ನು ನಿಲುಗಡೆ ಮಾಡುವ ಬಗ್ಗೆ ಸೂಕ್ತ ಕ್ರಮ ಜರುಗಿಸುವಂತೆ ಸಂಚಾರಿ ಆರಕ್ಷಕರು ರವರಿಗೆ ಸಭೆಯಲ್ಲಿ ಸೂಚಿಸಿದರು.
11. ಹಸಿ ಒಣ ಕಸ ಬಗ್ಗೆ ಚರ್ಚಿಸಲಾಗಿದ್ದು, ಮಾರ್ಷಲ್ ಗಳಿಗೆ ಆರೋಗ್ಯ ಇಲಾಖೆಯವರಿಗೆ ಹಸಿ ಮತ್ತು ಒಣ ಕಸವನ್ನು ಬೇರ್ಪಡಿಸಿ, ಸಂಗ್ರಹಿಸುವಂತೆ ಸಭೆಗೆ ತಿಳಿಸಿದರು.
12. ಮಾರ್ಷಲ್‌ಗಳಿಗೆ ಸಾರ್ವಜನಿಕ ಸ್ಥಳಗಳಲ್ಲಿ ಕಸ ಹಾಕಿದವರ ಮೇಲೆ ದಂಡ ವಿಧಿಸುವಂತೆ ಸೂಚಿಸಿದರು

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 99